ಶ್ರಿಯಾಳಲ್ಲಿ ಇನ್ನೂ ಕಡಿಮೆಯಾಗದ ಅಂಜಿಕೆ, ನಾಚಿಕೆ. ಯಾಂತ್ರಿಕವಾಗಿ ದೇಹವನ್ನು ಡಯಾನಾ ಕೈಗಳಲ್ಲಿ ಬಿಡಲಾರದೇ ಪರೀಕ್ಷಿಸುತ್ತಾ ಹೋಗುತ್ತಿದ್ದಾಳೆ. ಇಡೀ ಫೋರೆನ್ಸಿಕ್ ಪರೀಕ್ಷೆಗಳು ಪೂರ್ತಿಯಾದವು. ಪರೀಕ್ಷೆಗಾಗಿ ಸೆಲೈವ, ಬ್ಲಡ್, ಯೂರಿನ್ ಎಲ್ಲವನ್ನು ತೆಗೆದುಕೊಂಡರು. ಕೈಬೆರಳಿನ ಉಗುರುಗಳ ಕೆಳಗೆ ಅವಿತಿರುವ ರಹಸ್ಯಗಳನ್ನು ಸಹ ಛೇದಿಸುವ ಪ್ರಯತ್ನ ಮಾಡಿದಳು ಡಯಾನಾ. ಒಟ್ಟಿಗೆ ನಾಲ್ಕೈದು ಗಂಟೆಗಳಷ್ಟು ಹೊತ್ತು ಶ್ರಿಯಾಳನ್ನು ಬಗೆಬಗೆಯಾಗಿ ಪರೀಕ್ಷೆ ಮಾಡಿ, ಪ್ರತಿಯೊಂದು ಸಣ್ಣ ವಿವರವನ್ನೂ ನೋಟ್ ಮಾಡಿದಳು.

ಎ.ಸಿ.ಯಿಂದಾಗಿ ಕೋಣೆ ತಣ್ಣಗಿದೆ. ಆದರೆ, ಶ್ರಿಯಾಳ ಮೈಯೆಲ್ಲ ಬೆಚ್ಚಗೆ ಜ್ವರ ಬಂದಂತಾಗಿ, ಬಾಯಾರಿಕೆಯಿಂದಾಗಿ ಗಂಟಲು ಒಣಗುತ್ತಿದೆ. ಡಯಾನಾ ಕೇಳಿದವುಗಳಿಗೆ ಉತ್ತರ ಕೊಡುವಾಗ ರಾತ್ರಿಯ ಕೆಟ್ಟ ಕನಸನ್ನು ನೆನಪು ಮಾಡಿಕೊಂಡು, ಪ್ರತಿಯೊಂದು ಸಣ್ಣ ವಿವರವನ್ನು ಶ್ರಿಯಾ ಹೇಳಿದಳು. ಶ್ರಿಯಾ ನಡುಗುತ್ತಿರುವುದರಿಂದ ಹೊದಿಕೆಯನ್ನು ಕೊಟ್ಟಳು ಡಯಾನಾ. ನೀರನ್ನು ಕುಡಿಯುತ್ತಾ ನಡುವೆ ಸಮಯವನ್ನು ತೆಗೆದುಕೊಳ್ಳುತ್ತಾ ಒಟ್ಟಿಗೆ ನಡೆದ ವಿಷಯವನ್ನು ಹೇಳಿದಳು.

ರೇಪ್‌ಕಿಟ್ ಪರೀಕ್ಷೆ ಪೂರ್ತಿಯಾಗಿದೆ ಎಂದು ಡಯಾನಾ ಹೇಳಿದಾಗ ಒಂದು ಸಲ ಭೋರೆಂದು ಶ್ರಿಯಾ ಅತ್ತುಬಿಟ್ಟಳು.

ಎಷ್ಟೋಮಂದಿ ವಿಕ್ಟಿಮ್ಸ್‌ಗೆ ರೇಪ್‌ಕಿಟ್ ಪರೀಕ್ಷೆಗಳನ್ನು ಮಾಡಿದರೂ, ಪ್ರಾಸೆಸ್ ಬಗ್ಗೆ ಡಯಾನಾಗೆ ಯಾವಾಗಲೂ ಹೇಳಲಾರದಂಥ ನೋವು.

ಶ್ರಿಯಾಳನ್ನು ಸ್ವಲ್ಪ ಚೇತರಿಸಿಕೊಳ್ಳಲು ಬಿಟ್ಟನಂತರ ಮತ್ತೊಂದು ಸಲ ಕೇಳಿದಳು-

'Do you want me to call police'

ಇನ್ನು ತನ್ನ ಕೈಲಾಗುವುದಿಲ್ಲವೆಂಬಂತೆ ತಲೆಯಾಡಿಸಿದಳು ಶ್ರಿಯಾ.

ಟ್ರಾಮ ಕೌನ್ಸಿಲಿಂಗ್, ರೇಪ್‌ಗೆ ಸಂಬಂಧಪಟ್ಟಿರುವ ಬೇರೆ ವಿವರಗಳುಳ್ಳ ಬ್ರೋಚರ್ಸ್ ಕೊಡುತ್ತಾ - 'ಈಗ ಇಲ್ಲಿ ನೀವು ಹೇಳಿರುವ ವಿಷಯಗಳು, ನಿಮ್ಮ ಎಕ್ಸಾಮಿನೇಷನ್ ರಿಪೋರ್ಟ್, ನಿಮ್ಮ ಗಾಯಗಳನ್ನು ಒಳಗೊಂಡ ಫೋಟೋಗಳು, ಇವೆಲ್ಲಾ ಇನ್ವೆಸ್ಟಿಗೇಷನ್‌ನಲ್ಲಿ ಒಂದು ಭಾಗ. ನೀವು ಯಾವಾಗ ಪೋಲಿಸ್ ಕೇಸನ್ನಿಟ್ಟರೂ ಸರಿ, ರೇಪ್ ಕಿಟ್ಟನ್ನು ಹಾಜರು ಪಡಿಸುತ್ತಾರೆ' ಎಂದು ಮತ್ತೊಂದು ಸಲ ಶ್ರಿಯಾಗೆ ಹೇಳಿದಳು.

* * *

ಕಾಲೇಜಿನಿಂದ ಹಠಾತ್ತನೆ ಮನೆಗೆ ಬಂದಿರುವ ಮಗಳನ್ನು ನೋಡಿ ಮಾಲತಿಯ ಮುಖ ಅರಳಿತು. ಹೆಣ್ಣುಮಕ್ಕಳಿಗೆ ಎಷ್ಟಾದರೂ ಮನೆಯ ಚಿಂತೆ ಹೆಚ್ಚು ಅಂದುಕೊಂಡಳು. ಬಾಡಿದ ಮಗಳ ಮುಖವನ್ನು ನೋಡಿದ ಕೂಡಲೇ ಮಾಲತಿ ಸ್ವಲ್ಪ ಕಳವಳಗೊಂಡಳು.

'ಮೈಯಲ್ಲಿ ಹುಷಾರಿದೆಯಾ?' ಮಗಳ ಮೈಮುಟ್ಟಿ ನೋಡಿದಳು.

'ಹೊಟ್ಟೆ ನೋವು, ಬಳಲಿಕೆ, ಅಷ್ಟೇ' ಎಂದು ಬಿರಬಿರನೆ ಶ್ರಿಯಾ ತನ್ನ ರೂಮಿಗೆ ಹೋಗುತ್ತಿದ್ದರೆ ಆಫೀಸಿಗೆ ಹೋಗಲು ಎಷ್ಟು ಸಮಯವಿದೆ ಎಂದು ವಾಚ್ ನೋಡಿಕೊಳ್ಳುತ್ತಾ, 'ರೆಸ್ಟ್ ತೆಗೆದುಕೋ, ಹರ್ಬಲ್ ಟೀ ತರುತ್ತೇನೆ' ಎಂದಿದ್ದಳು.

'ಮಲಗುತ್ತೇನೆ, ಡೋಂಟ್ ಡಿಸ್ಟರ್ಬ್ ಮಿ' ಬಾಗಿಲು ಹಾಕಿಕೊಂಡಳು.

ಪಿರಿಯಡ್ಸ್ ಸಮಯದಲ್ಲಿ ಶ್ರಿಯಾಗೆ ಹೊಟ್ಟೆ ನೋವು ಮಾಮೂಲೇ. ಆದ್ದರಿಂದ ಗ್ಯಾರೇಜ್‌ನಿಂದ ಕಾರ್ ತೆಗೆದು ಆಫೀಸ್‌ಗೆ ಹೊರಟಳು.

ಡ್ರೈವ್ ಮಾಡುತ್ತಿದ್ದರೆ ಮಾಲತಿಗೆ ತನ್ನ ತಾಯಿ ನೆನಪಾದಳು. ಹೇಳದೇ ಯಾವಾಗಲಾದರೂ ಹಾಸ್ಟೆಲ್‌ನಿಂದ ಮನೆಗೆ ಬಂದರೆ, ಬಾಗಿಲು ಹಾಕಿ ಬಗೆಬಗೆಯಾಗಿ ಅಮ್ಮ ಹಾಕುತ್ತಿರುವ ಪ್ರಶ್ನೆಗಳೆಲ್ಲಾ ನೆನೆಪಾಗಿ ನಕ್ಕುಬಿಟ್ಟಳು. 'ಲಿಬರಲ್ ಡೆಮೊಕ್ರಾಟಿಕ್ ಅಮೇರಿಕನ್ ಮೊಮ್' ಎಂದು ಗೆಳತಿಯರೆಲ್ಲಾ ತನ್ನನ್ನು ಕುರಿತು ಮಾಡುವ ಪ್ರಶಂಸೆ ನೆನಪಾಗುತ್ತಿರುವಂತೆ, ಸಣ್ಣನೆಯ ಕಿರುನಗೆಯೊಂದಿಗೆ 'ನಾನು ಅಮ್ಮನಂತೆ ಅಲ್ಲ' ಎಂದುಕೊಂಡಳು.

* * *

ಸಾಯಂಕಾಲ ಮನೆಗೆ ಬಂದಕೂಡಲೇ ಮಾಲತಿ ಶ್ರಿಯಾಳ ರೂಮ್‌ಗೆ ಹೋದಳು.

ಕಣ್ಣು ತೆರೆದುಕೊಂಡು ಮಂಚದಮೇಲೆ ಮಲಗಿ, ಕೈಯಲ್ಲಿ ಫೋನನ್ನು ಆಕಡೆ ಈಕಡೆ ತಿರುಗಿಸುತ್ತಾ